ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ನಿಂ.ವಾ.ಕ

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ        ದಿನಾಂಕ : DATE : 21-2-2019

ನಿಧನ ವಾರ್ತೆ

## ಮಾಜಿ ಶಾಸಕ ಬಸಗೌಡ ಪಾಟೀಲ



ಸಂಕೇಶ್ವರ: ಸಹಕಾರಿ ಧುರೀಣ, ವಿಧಾನ ಪರಿಷತ್ ಮಾಜಿ ಸದಸ್ಯ ಶತಾಯುಷಿ ಬಸಗೌಡ ಪಾಟೀಲ (102) ಬುಧವಾರ ಸ್ವಗ್ರಾಮ ಅಮ್ಮಿನಭಾವಿಯಲ್ಲಿ ನಿಧನರಾದರು.

ಅವರಿಗೆ ಮಾಜಿ ಸಚಿವ ಎ.ಬಿ. ಪಾಟೀಲ ಸೇರಿದಂತೆ ಇಬ್ಬರು ಪುತ್ರರು ಇದ್ದಾರೆ. 1917ರ ಜನವರಿ 10ರಂದು ಜನಿಸಿದ್ದ ಬಸಗೌಡ, ಸ್ವಾತಂತ್ರ್ಯ ಚಳವಳಿಯ ವೇಳೆ ಗಾಂಧಿ ತತ್ವಗಳಿಗೆ ಮಾರು ಹೋಗಿದ್ದರು. ಗ್ರಾಮದಲ್ಲಿ ಖಾದಿ ಬಟ್ಟೆ ತಯಾರಿಸುವ ಘಟಕಗಳನ್ನು ಸ್ಥಾಪಿಸಿದ್ದರು.

ಎಸ್.ಡಿ.ವಿ.ಎಸ್ ಸಂಘ ಸ್ಥಾಪಿಸಿ, ಯಾದಗೂಡ, ಕಣಗಲಾ, ಹೆಬ್ಬಾಳಗಳಲ್ಲಿ ಮಾಧ್ಯಮಿಕ ಶಾಲೆ, ಸಂಕೇಶ್ವರದಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆ ಮತ್ತು ಶಿವರುದ್ರೇಶ್ವರ ಕಲಾ ಮಹಾವಿದ್ಯಾಲಯ ತೆರೆದಿದ್ದರು.

ಧಾರವಾಡದಲ್ಲಿ ಕೃಷಿ ಕಾಲೇಜು, ಕೃಷಿ ವಿಶ್ವವಿದ್ಯಾಲಯ ಹಾಗೂ ಸಂಕೇಶ್ವರದಲ್ಲಿ ಕೃಷಿ ಸಂಶೋಧನಾ ಕೇಂದ್ರ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು. 1956ರಲ್ಲಿ ಅಪ್ಪಣ್ಣಗೌಡ ಪಾಟೀಲರ ಜೊತೆಗೂಡಿ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪಿಸಿದ್ದರು.

ಸ್ವಾತಂತ್ರ್ಯ ಚಳವಳಿ, ಕರ್ನಾಟಕ ಏಕೀಕರಣ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ರಾಜಕೀಯವಾಗಿ ಸಂಸ್ಥಾ ಕಾಂಗ್ರೆಸ್ ಜತೆ ಗುರುತಿಸಿಕೊಂಡಿದ್ದ ಅವರು, ನಂತರ ಜನತಾ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

1988ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ರಾಜ್ಯ ಸರ್ಕಾರದಿಂದ 2000 ದಲ್ಲಿ ಇವರಿಗೆ 'ಸಹಕಾರ ಶಿಲ್ಪಿ' ಎಂಬ ಪ್ರಶಸ್ತಿ ನೀಡಲಾಗಿತ್ತು.

ಗುರುವಾರ ಮಧ್ಯಾಹ್ನ ಅಮ್ಮಿನಭಾವಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.